

# ಅಂದದ ಚಾಂದ್‌ಬಾಲಿ

ಫ್ಯಾಷನ್ ಪ್ರಿಯರಿಗೆ ಚಾಂದ್‌ಬಾಲಿ ಆಭರಣ ಬಂದಿದೆ. ಕಿವಿಯಲ್ಲಿ ಎದ್ದು ಕಾಣುವಂಥ ಈ ಒಡವೆ ಸಂಜೆ, ರಾತ್ರಿಯ ಸಮಾರಂಭಗಳಿಗೆ ಹೋಗುವಾಗ ಧರಿಸಿಕೊಳ್ಳಲು ಅತ್ಯಂತ ಸೂಕ್ತವಾದದ್ದು.

■ ಕೃಷ್ಣವೇಣಿ ಪ್ರಸಾದ್ ಮುಳಿಯ

ಚಿತ್ರಗಳು: ಮುಳಿಯ ಕೇಶವ ಭಟ್ ಅಂಡ್ ಸನ್ಸ್

ಚಿನ್ನದ ಆಭರಣದಲ್ಲಿ ಅದೆಷ್ಟು ವೈವಿಧ್ಯತೆ? ಸಾಂಪ್ರದಾಯಿಕ ಆಧುನಿಕ ಎರಡೂ ಶೈಲಿಗೆ ಒಪ್ಪುವಂತಹ ಆಭರಣ ಚಿನ್ನದಲ್ಲಿ ಲಭ್ಯ. ಸದ್ಯ ಹಳೆಯ ಆಭರಣವು ಹೊಸತಾಗಿ ಮಾರ್ಪಟ್ಟಿದೆ. ಕಿವಿಯೋಲೆಯನ್ನು ತೆಗೆದುಕೊಂಡರೆ 'ಚಾಂದ್ ಬಾಲಿ' ಆಭರಣವು ಇಂದು ಅತಿಯಾಗಿ ಬಳಕೆಯಲ್ಲಿದೆ. 'ಚಾಂದ್ ಬಾಲಿ' ಆಭರಣ ನೋಡಲು ಸುಂದರ. ಈ ಒಡವೆ ಚಂದ್ರನಂತೆ ಇರುವುದರಿಂದ ಈ ಹೆಸರು ಬಂತು. ವೃತ್ತಾಕಾರವಾಗಿಯೂ, ಅರ್ಧ ಚಂದ್ರಾಕೃತಿಯಲ್ಲಿಯೂ, ಹರಳುಗಳನ್ನು ಪೋಣಿಸಿಯೂ, ಮುತ್ತುಗಳನ್ನು ಪೋಣಿಸಿಯೂ, ಜಾಲರಿಗಳನ್ನು ಹೊಂದಿದ್ದು ಬಹು ರಮಣೀಯವಾಗಿರುತ್ತದೆ.

ಶೃಂಗಾರ ಪ್ರಿಯರಿಗೆ ಇದು ಹೇಳಿ ಮಾಡಿಸಿದ ಆಭರಣ. ಏಕೆಂದರೆ ಈ ಚಾಂದ್ ಬಾಲಿ ಕಿವಿಯೋಲೆ ಒಂದು ಧರಿಸಿದರೆ ಸಾಕು. ಎಂತಹವರೂ ಒಮ್ಮೆ ತಿರುಗಿ ಕಿವಿಯೋಲೆಯತ್ತ ನೋಟ ಬೀರುತ್ತಾರೆ. ಮುದ್ದು ಕುವರಿ ಕೆಂಪು ಕೆನ್ನೆಗೆ ಮುತ್ತಿಕ್ಕುವ ಅದ್ಭುತ ಆಭರಣ ಇದು. ಕಿವಿಯ ಹಾಲೆ ದೊಡ್ಡದಾಗಿದ್ದಾಗಲೂ, ಚಿಕ್ಕದಿದ್ದರೂ ಇದನ್ನು ತೊಡಬಹುದು. ಗಾತ್ರವನ್ನು ಕಿವಿಯ ಹಾಲೆಗೆ ತಕ್ಕಂತೆ ಅಳವಡಿಸಿ ತೊಟ್ಟುಕೊಳ್ಳಬೇಕು.

## ಕಣ್ಮನ ಸೆಳೆಯುವ ವಿನ್ಯಾಸ

ಇದರಲ್ಲಿ ವೃತ್ತಾಕಾರವಾದ ಆಕೃತಿ ಹೆಚ್ಚು ಬಳಕೆಯಲ್ಲಿದೆ. ತ್ರಿಕೋನ, ಓವಲ್, ಡೈಮಂಡ್ ಆಕೃತಿ ಫ್ಯಾಷನ್ ಪ್ರಿಯರಿಗೆ ಅಚ್ಚುಮೆಚ್ಚು. ಇದರ ಹೊರಗಿನ ಭಾಗದ ಮಧ್ಯ ಸ್ವಲ್ಪ ಖಾಲಿ ಜಾಗವಿದ್ದು, ಓಲಾಡುವ ಚಿಕ್ಕ ಪದಕ, ಜುಮುಕಿ, ಬಂಗಾರ ಒಳಗೊಂಡಿರುವ ಮಣಿ (ಮುತ್ತು, ಹವಳ, ಹರಳು ಇತ್ಯಾದಿ) ಇದ್ದಾಗ ಅದರ ಅಂದ ಹೆಚ್ಚು. ಇದರಲ್ಲಿ. ಈ ವಿನ್ಯಾಸದಲ್ಲಿ ತುದಿಗಳು ಮೊನಚಾಗಿಲ್ಲದೆ ಹಿತವಾಗಿರುವಂತೆ ನೋಡಿಕೊಳ್ಳಿ. ಗುಂಡಗೆ ಇರುವ ಚಿನ್ನದ ಗುಂಡು, ಆಭರಣದ ಕೆಳಭಾಗದಲ್ಲಿ ಸಾಲಾಗಿ ಒಂದರ ಅನಂತರ ಒಂದು ಜೋಡಿಕೊಂಡು ನೇತಾಡುತ್ತಿರಬೇಕು. ಸಾಧಾರಣವಾಗಿ ಆ್ಯಂಟಿಕ್ ವಿನ್ಯಾಸಕ್ಕೆ ಈಗ ಮಾರುಕಟ್ಟೆಯಲ್ಲಿ ಅಧಿಕ ಡಿಮ್ಯಾಂಡ್ ಇದೆ. ಇದರ ಆಕರ್ಷಣೆಯೇ ಇದರ ಆಸ್ತಿ. ಏಕೆಂದರೆ ಲೆಹಂಗಾ, ಸಾರಿ, ಚೂಡಿದಾರ್ ಮೂರೂ ಬಟ್ಟೆಗಳಿಗೆ ಹೊಂದುವಂತಹದ್ದು. ತರುಣಿಯರ ಅಚ್ಚುಮೆಚ್ಚಿನ ಆಭರಣ ಎಂದರೆ ತಪ್ಪಲ್ಲ.

ಹರಳುಗಳ ಬಳಕೆ

ರೂಬಿ, ಎಮರಾಲ್ಡ್ ಚಪ್ಪಟೆಯಾಗಿದ್ದು, ಡ್ರಾಪ್ ಶೇಪನ್ನು ಬಳಸಿ ಮಾಡಿದಾಗ ಸೇವಂತಿಗೆ ದಳದಂತೆ ಗೋಚರಿಸುತ್ತದೆ. ಯಾವ ಬಣ್ಣದ ಹರಳು ಎಂದು ಎದ್ದು ಕಾಣುತ್ತದೆ. ಇದು ಒಂದು ತರದಲ್ಲಿ ಬಳಸಿದರೆ ಪುಟ್ಟ ಪುಟ್ಟ ಮುತ್ತು, ಕೆಂಪು ಮುತ್ತು ಬಳಸಿಯೂ ಮಾಡಿದರೆ ಸೊಗಸಾಗಿರುತ್ತದೆ. ಕೇವಲ ಬಿಳಿ ಡೈಮಂಡ್, ಅಮೆರಿಕನ್ ಡೈಮಂಡ್ (ಕ್ಯುಬಿಕ್ ಝಿರ್ಕೋನಿಯಾ) ಬಳಸಿ ಮಾಡಿದಲ್ಲಿ ರಾತ್ರಿ ಫಳಫಳನೆ ಮಿಂಚುತ್ತದೆ. ಆಭರಣದ ಮೇಲೆ ಬೆಳಕು ಬಿದ್ದಾಗ ಮಿಂಚುತ್ತದೆ. ಆ ಮಿಂಚು ಮುಖದ ಅಂದ ಹೆಚ್ಚಿಸುತ್ತದೆ. ಕ್ಯುಬಿಕ್ ಝಿರ್ಕೋನಿಯಾ ಅಗ್ಗವಾಗಿದ್ದು ಕೈಗೆಟುಕುವ ಬೆಲೆಯಲ್ಲಿ ದೊರಕುತ್ತದೆ. ಬಿಳಿಯ ಹರಳುಗಳ ಹೊಳಪು ರಾತ್ರಿ ಪ್ರಕಾಶಮಾನವಾಗಿರುತ್ತದೆ. ಹೆಣ್ಮಕ್ಕಳು ತೊಟ್ಟ ಆಭರಣ ನೋಡಲು ಕಣ್ಮನ ಸೆಳೆದಂತೆ ಇರುತ್ತದೆ. ಪುಟ್ಟ ಮಕ್ಕಳಿಗೂ ಅಷ್ಟೆ, ಮಿಂಚುವ ಆಭರಣವನ್ನು ತೊಟ್ಟು ತಮ್ಮ ಅಂದವನ್ನು ತಾವೇ ನೋಡುವುದೆಂದರೆ ಬಲು ಖುಷಿ.

ಈ ಆಭರಣವನ್ನು ತಿರುಗಣೆ ಇಲ್ಲದೆ ತಂತಿಯ ಸಹಾಯದಿಂದ ತಯಾರಿಸಬಹುದು. ಯಾಕೆಂದರೆ ಇದು ಎದುರು ಮುಖವಾಗಿದ್ದರೆ ಸಾಕು, ಕೆಲವರ ಕಿವಿ ತೂತು ಚಿಕ್ಕದಾಗಿರುತ್ತದೆ. ಆಗ ತಿರುಗಣೆಯ ದಂಡು ದಪ್ಪವಾಗಿದ್ದರೆ ತುಂಬಾ ಕಷ್ಟವಾಗುತ್ತದೆ. ಕಿವಿಯೋಲೆಯ ಕೆಳಭಾಗ ಸ್ವಲ್ಪ ಭಿನ್ನವಾಗಿ ಭಾರ ಇರುವುದರಿಂದ ಕಿವಿ ನೋವಾಗುವುದನ್ನು ಇದು ಕಡಿಮೆ ಮಾಡುತ್ತದೆ. ಕಿವಿಯೋಲೆ ದೊಡ್ಡದಾಗಿರುವುದರಿಂದ ಸಮಾರಂಭಗಳಿಗೆ ಹೋಗುವಾಗ ಧರಿಸಿ ಬಂದ ಕೂಡಲೇ ತೆಗೆದಿಡಿ. ಆಭರಣದ ಬಾಕ್ಸ್‌ನಲ್ಲೇ ಎತ್ತಿಡಿ. ಕೂದಲು, ಧರಿಸಿದ ಬಟ್ಟೆಯ ನೂಲು ಆಭರಣದೊಂದಿಗೆ ಸಿಕ್ಕಿ ಹಾಕಿಕೊಂಡು ಮುತ್ತು, ಹರಳುಗಳು ಬಿದ್ದು ಹೋಗಬಹುದು.

ನೆನಪಿಡಿ: ಆಭರಣ ಮಲಗುವಾಗ ಧರಿಸಲೇ ಬಾರದು. ■